# ವಾಸ್ತವವಾದಿ ಕಥೆಗೆ ದನಿಯಾಗಿದ್ದೇನೆ

**ಚಂದನಾ ಅನಂತಕೃಷ್ಣ**
ಕಲರ್ಸ್ ಕನ್ನಡದ 'ಹೂಮಳೆ'ಯ ಲಹರಿ



◆ ಹೂ ಮಳೆ ಪಾತ್ರ ಹೇಗಿದೆ ಅನ್ನಿಸುತ್ತದೆ?

ಪಾತ್ರ ತುಂಬ ಕ್ರಿಯಾಶೀಲತೆಯಿಂದ ಕೂಡಿದೆ. ಎಲ್ಲರ ಜೊತೆ ಲವಲವಿಕೆಯಿಂದ ವರ್ತಿಸುವ ಪಾತ್ರ ನನ್ನದು. ಮುಕುಂದನನ್ನು ಒಂದು ವರ್ಷದಿಂದ ಪ್ರೀತಿ ಮಾಡುತ್ತಿರುತ್ತೇನೆ. ಆತ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾನೆ. ಐಎಎಸ್ ಪರೀಕ್ಷೆ ಬರೆದು ಸಂದರ್ಶನಕ್ಕಾಗಿ ಕಾಯುತ್ತಿದ್ದಾನೆ. ಅವನಿಗೆ ಕೆಲಸ ಸಿಕ್ಕಮೇಲೆ ಅಮ್ಮನ ಅನುಮತಿ ಪಡೆದು ಮದುವೆ ಆಗಬೇಕು ಎನ್ನುವ ಆಲೋಚನೆ ನನ್ನದು. ಮುಕುಂದನ ಬಗ್ಗೆ ಅಪಾರ ಪ್ರೀತಿ, ಅಮ್ಮನ ಬಗ್ಗೆ ಅಷ್ಟೇ ಭಯ ನನ್ನಲ್ಲಿದೆ. ಅಮ್ಮ (ಕಾವೇರಿ) ಈಗ ಕಾರ್ಪೋರೇಟರ್ ಆಗಿದ್ದಾರೆ. ಅವರಿಗೆ ಶಾಸಕಿ ಆಗಬೇಕು ಎನ್ನುವ ಆಸೆ. ತಮ್ಮ ಕನಸಿನ ಈಡೇರಿಕೆಗಾಗಿ ಏನಾದರೂ ಮಾಡಲು ಸಿದ್ಧ. ಅದಕ್ಕಾಗಿ ತಮ್ಮ ಪಕ್ಷದ ಅಧ್ಯಕ್ಷ ಯದುವೀರ್ ಅವರಿಗೆ ನನ್ನನ್ನು ಕೊಡುವ ಯೋಚನೆ ಇದೆ. ಅವರಿಗೆ ಪತ್ನಿ ವಿಯೋಗ ಆಗಿದೆ. ಒಂದು ಮಗು ಕೂಡ ಇದೆ. ಅವರಿಗೆ ಮಗಳನ್ನು ಕೊಟ್ಟರೆ ತನಗೆ ಸುಲಭವಾಗಿ ಸೀಟು ಸಿಗುತ್ತದೆ ಎನ್ನುವುದು ಅವರ ಲೆಕ್ಕಾಚಾರ. ನನ್ನ ಪಾತ್ರ ತುಂಬ ಘನತೆಯಿಂದ ಕೂಡಿದೆ.

◆ ಮೊದಲಿನ ಪಾತ್ರಕ್ಕೆ ಹೋಲಿಸಿದರೆ ಲಹರಿಯ ಅನುಭವ

'ರಾಜಾರಾಣಿ'ಯ ಪಾತ್ರಕ್ಕೂ ಇದಕ್ಕೂ ಭಿನ್ನತೆ ಇದೆ. ಅಲ್ಲಿ ಮುಗ್ಧತೆ ಜೊತೆಗೆ ಗುಡುಗಾಟದ ಹುಡುಗಿಯಂತಿದ್ದೆ. ಇಲ್ಲಿ ಹಾಗಲ್ಲ ಈಕೆಗೆ ಪ್ರಬುದ್ಧತೆ ಇದೆ. ಚಿಕ್ಕಹುಡುಗಿಯಂತಹ ಪಾತ್ರಕ್ಕಿಂತ ಭಿನ್ನವಾದ ಪ್ರಬುದ್ಧ ಪಾತ್ರವನ್ನು ನಿರ್ವಹಿಸಬೇಕು ಎನ್ನುವ ದೃಷ್ಟಿಯಿಂದಲೇ ಈ ಪಾತ್ರವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಕಳೆದ ವಾರವಷ್ಟೇ ಪ್ರಸಾರ ಆರಂಭವಾಗಿದೆ. ಈ ಪಾತ್ರ ಆತ್ಮವಿಶ್ವಾಸವನ್ನು ವೃದ್ಧಿಸುವಂತಿದೆ. ನಮ್ಮ ಜೀವನಕ್ಕೂ ಅಳವಡಿಸಿಕೊಳ್ಳುವಂತಹ ಸಾಕಷ್ಟು ಸಂಗತಿಗಳು ಇದರಲ್ಲಿದೆ. ವೀಕ್ಷಕರ ದೃಷ್ಟಿಯಿಂದ ನೋಡಿದರೆ, ನಮ್ಮ ಮನೆಯಲ್ಲೂ ಇಂತಹ ಹುಡುಗಿ ಇದ್ದಾಳೆ ಎಂಬ ಭಾವನೆ ಮೂಡುವಂತಿದೆ. ಅಭಿನಯದ ಆಯಾಮದಿಂದ ನೋಡಿದರೂ ವಾಸ್ತವವಾದಿ ನೆಲೆಯಲ್ಲಿ ವ್ಯವಹರಿಸಿದಂತೆ ಇದೆ. ನಟನೆ ಎಂದು ಅನ್ನಿಸದಷ್ಟು ಸಹಜತೆ ಇದಕ್ಕಿದೆ. ಇದರ ನಿರ್ವಹಣೆ ತುಂಬಾನೇ ಖುಷಿಯನ್ನು ಕೊಡುತ್ತದೆ.

◆ ಪಾತ್ರ ಅತ್ತೂ ಅತ್ತು ಅಯ್ಯೋ ಪಾಪ ಎಂದು ಅನ್ನಿಸಿಕೊಳ್ಳುತ್ತಾ, ಇಲ್ಲ ಬದಲಾವಣೆಗೆ ನಾಂದಿ ಹಾಡಿ ಶಹಬ್ಬಾಸ್ ಎನ್ನಿಸಿಕೊಳ್ಳುತ್ತಾ?

ವೀಕ್ಷಕರಲ್ಲಿ ಧಾರಾವಾಹಿಗಳ ಬಗ್ಗೆ ಇರಬಹುದಾದ ಪೂರ್ವ ಕಲ್ಪನೆಯನ್ನು ಖಂಡಿತ ಮುರಿಯುತ್ತದೆ. ಕಥೆ ಪ್ರತಿ ಹಂತದಲ್ಲೂ ಭಿನ್ನ ತಿರುವು ಪಡೆಯುತ್ತಿರುತ್ತದೆ. ವೀಕ್ಷಕರಾಗಿ ನಮ್ಮ ಕಲ್ಪನೆ ಹಾಗೂ ಊಹೆಗೆ ನಿಲುಕದಂತೆ ಕಥೆ ತೆರೆದುಕೊಳ್ಳುತ್ತಾ ಹೋಗುತ್ತದೆ. ಮುಂದಿನ ಕುತೂಹಲವನ್ನು ಕಾಯ್ದಿಟ್ಟುಕೊಳ್ಳುತ್ತದೆ. ಇದು ಕೇವಲ ನಾಟಕ ಅಲ್ಲ, ನಮ್ಮ ನಡುವೆ ನಡೆಯುವ ಘಟನೆಗಳ ನಿರೂಪಣೆ ಎನ್ನುವ ಅನುಭವವನ್ನು ನೀಡುತ್ತದೆ. ಇದೇ ಇದರ ಹೆಚ್ಚುಗಾರಿಕೆ ಎನ್ನುವುದು ನನ್ನ ಭಾವನೆ.

◆ ನಿಮ್ಮ ಬಗ್ಗೆ ಹೇಳುವುದಾದರೆ...

ಅಂತಿಮ ವರ್ಷದ ಪದವಿಯಲ್ಲಿ ಓದುತ್ತಿದ್ದೇನೆ. ಬಾಲ್ಯದಿಂದಲೂ ಅಭಿನಯದ ಬಗ್ಗೆ ಆಸಕ್ತಿ ಇತ್ತು. ಮೂಲತಃ ಶಾಸ್ತ್ರೀಯ ನೃತ್ಯ ಪಟು. ಜೊತೆಗೆ ಸಂಗೀತವನ್ನು ಅಭ್ಯಾಸ ಮಾಡಿದ್ದೇನೆ. ಆ ಕ್ಷೇತ್ರದಲ್ಲಿಯೇ ಮುಂದುವರಿಯಬೇಕಿತ್ತು, ಗೊತ್ತಿಲ್ಲದೆ ಅಭಿನಯ ಕ್ಷೇತ್ರವನ್ನು ಪ್ರವೇಶ ಮಾಡಿದ್ದೇನೆ. ಕಾಲ ನನ್ನನ್ನು ಯಾವಕಡೆ ಕರೆದುಕೊಂಡು ಹೋಗುತ್ತದೆಯೋ ಹಾಗೆ ಸಾಗುತ್ತಿದ್ದೇನೆ. 'ಪುಟ್ಟಮಲ್ಲಿ'ಯಲ್ಲಿ ಸಹನಟಿಯಾದ ನನಗೆ 'ರಾಜಾರಾಣಿ'ಯಲ್ಲಿ ಮುಖ್ಯಪಾತ್ರಕ್ಕೆ ಅವಕಾಶ ಸಿಕ್ಕಿತು. 'ಬಿಗ್‌ಬಾಸ್'ನಲ್ಲಿದ್ದೆ. 'ಹಾಡುಕರ್ನಾಟಕ' ನಿರೂಪಣೆ ಮಾಡುತ್ತಿದ್ದೆ. ಅಷ್ಟರಲ್ಲಿ ಲಾಕ್‌ಡೌನ್ ಎದುರಾಯಿತು. ನಂತರ ಈ ಧಾರಾವಾಹಿ ಸಿಕ್ಕಿದೆ.

ಬಿಗ್‌ಬಾಸಿನಿಂದ ನನಗೆ ಹೆಚ್ಚು ಜನಪ್ರಿಯತೆ ಸಿಕ್ಕಿತು. ಅಭಿನಯದಲ್ಲಿ ಖಾಸಗಿ ಬದುಕು ಗೊತ್ತಾಗುವುದಿಲ್ಲ. ಪಾತ್ರ ಮಾತ್ರ ಗೊತ್ತಾಗುತ್ತದೆ. ಬಿಗ್‌ಬಾಸ್‌ನಲ್ಲಿ ನಾವು ಏನು ಎನ್ನುವ ಪ್ರತಿಬಿಂಬವನ್ನು ಕಾಣಲು ಸಾಧ್ಯ ಆಗುತ್ತದೆ. ವಾಸ್ತವ ಏನು ಅನ್ನುವುದು ಗೊತ್ತಾಗುತ್ತದೆ. ನಾಟಕ ಆಡಿ ಎಲ್ಲೂ ಬದುಕಲು ಆಗುವುದಿಲ್ಲ.

◆ ನಿತ್ಯ ಯಾವ ರೀತಿಯ ತಾಲೀಮು ಮಾಡುತ್ತೀರಿ?

ಧಾರಾವಾಹಿ ಎಂದರೆ ತಿಂಗಳಲ್ಲಿ 20ರಿಂದ 25 ದಿನ ಚಿತ್ರೀಕರಣದಲ್ಲಿ ಕಳೆದುಹೋಗುತ್ತದೆ. ನಾವು ನಮ್ಮ ದೇಹ ಮತ್ತು ಮನಸ್ಸಿನ ಸ್ವಾಸ್ಥ್ಯದ ಬಗ್ಗೆ ಯೋಚಿಸಲೇಬೇಕು. ಮಾನಸಿಕ ಆರೋಗ್ಯ ತುಂಬ ಮುಖ್ಯ. ನಿತ್ಯ ಬೆಳಿಗ್ಗೆ ಒಂದಿಷ್ಟು ಹೊತ್ತು ವ್ಯಾಯಾಮ ಮತ್ತು ಯೋಗವನ್ನು ಮಾಡುತ್ತೇನೆ. ಯಾವತ್ತೋ ಒಮ್ಮೆ ಸಮಯವೇ ಇಲ್ಲ ಎಂದರೂ ಸೂರ್ಯನಮಸ್ಕಾರವನ್ನು ತಪ್ಪದೇ ಮಾಡುತ್ತೇನೆ. ಮನೆಯ ಊಟಕ್ಕೆ ಪ್ರಾಮುಖ್ಯತೆ ನೀಡುತ್ತೇನೆ. ಚಿತ್ರೀಕರಣದ ಸಂದರ್ಭದಲ್ಲಿ ನಾನೇ ಅಡುಗೆ ಮಾಡಿಕೊಂಡು ಹೋಗುತ್ತೇನೆ. ಊಟೋಪಚಾರದ ಬಗ್ಗೆ ಒಂದಿಷ್ಟು ಕಟ್ಟುನಿಟ್ಟಿನ ನಿಯಮವನ್ನೂ ಪಾಲಿಸುತ್ತೇನೆ. ಪಾತ್ರಕ್ಕೆ ಸಂಬಂಧಿಸಿದಂತೆ ಸ್ಕ್ರಿಪ್ಟ್ ಓದಿದ ನಂತರ ಅದರ ಅಗತ್ಯಗಳನ್ನು ಈಡೇರಿಸುವ ನಿಟ್ಟಿನಲ್ಲಿ ನಿರಂತರ ತಾಲೀಮು ಮಾಡುತ್ತೇನೆ. ಏನನ್ನು ಮಾಡಬೇಕು ಎನ್ನುವ ಬಗ್ಗೆ ನಿರ್ದೇಶಕರ ಜೊತೆ ಚರ್ಚಿಸುತ್ತೇನೆ. ಲಹರಿ ಪಾತ್ರಕ್ಕೆ ಏನು ಬೇಕಾಗಬಹುದು ಎನ್ನುವ ಬಗ್ಗೆಯೂ ಚಿಂತಿಸುತ್ತೇನೆ.

■ ರಾಘವೇಂದ್ರ ಕೆ.